ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 27–11–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಚಂದನವನ ಹಾಗೂ ವರ್ಷದ ಹಾದಿ ಮತ್ತು ಕರ್ನಾಟಕ ಚಲನಚಿತ್ರ ಅಕಾಡೆಮಿಯ ವೆಬ್‌ಸೈಟ್‌ಗೆ ಚಾಲನೆ:<br><br>ಪುಸ್ತಕ ಬಿಡುಗಡೆ ಹಾಗೂ ವೆಬ್‌ಸೈಟ್‌ಗೆ ಚಾಲನೆ:<br><br>ಡಾ. ಎನ್.ಎಸ್. ಚನ್ನಪ್ಪಗೌಡ,<br>ಸರ್ಕಾರದ ಕಾರ್ಯದರ್ಶಿಗಳು,<br>ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ.<br><br>ಅಧ್ಯಕ್ಷತೆ:<br><br>ಎಸ್. ವಿ. ರಾಜೇಂದ್ರಸಿಂಗ್ ಬಾಬು<br>ಅಧ್ಯಕ್ಷರು,<br>ಕರ್ನಾಟಕ ಚಲನಚಿತ್ರ ಅಕಾಡೆಮಿ,<br><br>ಮುಖ್ಯ ಅತಿಥಿಗಳು:<br><br>ಟಿ.ಎಸ್. ನಾಗಾಭರಣ,<br>ಮಾಜಿ ಅಧ್ಯಕ್ಷರು,<br>ಕರ್ನಾಟಕ ಚಲನಚಿತ್ರ ಅಕಾಡೆಮಿ,<br><br>ಶ್ರೀಮತಿ ತಾರಾ ಅನೂರಾಧಾ,<br>ವಿಧಾನ ಪರಿಷತ್ ಸದಸ್ಯರು ಹಾಗು ಮಾಜಿ ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ಅಕಾಡೆಮಿ, | 28–11–2015<br>ಶನಿವಾರ<br>ಮಧ್ಯಾಹ್ನ<br>12–30 ಗಂಟೆಗೆ | ಪಿ–2 ಹಾಲ್, ಕರ್ನಾಟಕ ಸ್ಟೇಟ್ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ಬೆಂಗಳೂರು. |

| | | | |
|---|---|---|---|
| | ಸಾ.ರಾ. ಗೋವಿಂದು,<br>ಅಧ್ಯಕ್ಷರು,<br>ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ,<br><br>ಎನ್.ಆರ್ ವಿಶುಕುಮಾರ್,<br>ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,<br><br>ಶ್ಯಾಮಸುಂದರ ಕುಲಕರ್ಣಿ,<br>ಸದಸ್ಯರು,<br>ಚಂದನವನ ಸಂಪಾದಕ ಮಂಡಳಿ,<br><br>ಚ.ಹ. ರಂಗನಾಥ್,<br>ಸದಸ್ಯರು,<br>ಚಂದನವನ ಸಂಪಾದಕ ಮಂಡಳಿ,<br><br>ವಿಶಾಖ್ ಎನ್,<br>ಸದಸ್ಯರು,<br>ಚಂದನವನ ಸಂಪಾದಕ ಮಂಡಳಿ,<br><br>ಚೇತನ್ ನಾಡಿಗೇರ್,<br>ಸದಸ್ಯರು,<br>ಚಂದನವನ ಸಂಪಾದಕ ಮಂಡಳಿ, | | |
| 2. | ಪತ್ರಿಕಾಗೋಷ್ಠಿ:<br><br>ಕೆ. ನಾಗರಾಜು,<br>ಕೇಂದ್ರ ಚುನಾವಣಾಧಿಕಾರಿಗಳು,<br>ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು | **30–11–2015**<br>ಸೋಮವಾರ<br>ಬೆಳಿಗ್ಗೆ<br>**11–30** ಗಂಟೆಗೆ | ಪಂಪ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,<br>ಬೆಂಗಳೂರು – **560 018** |
| 3. | "ಬೆಳ್ಳಿ ಹೆಜ್ಜೆ" ಯಲ್ಲಿ ನಮ್ಮೊಂದಿಗೆ ಹ್ಯಾಟ್ರಿಕ್ ಹೀರೋ – ಸೆಂಚುರಿ ಸ್ಟಾರ್ ಡಾ. ಶಿವರಾಜ್ ಕುಮಾರ್.<br><br>ಮುಖ್ಯ ಅತಿಥಿಗಳು:<br><br>ಆರ್. ರೋಷನ್ ಬೇಗ್,<br>ಮೂಲಸೌಲಭ್ಯ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು.<br><br>ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್,<br>ಹಿರಿಯ ಚಲನಚಿತ್ರ ನಿರ್ಮಾಪಕರು | **30–11–2015**<br>ಸೋಮವಾರ<br>ಸಂಜೆ<br>**5–00** ಗಂಟೆಗೆ | ರವೀಂದ್ರ ಕಲಾಕ್ಷೇತ್ರ, ಬೆಂಗಳೂರು. |

| | | | |
|---|---|---|---|
| | ಸಾ.ರಾ. ಗೋವಿಂದು,<br>ಅಧ್ಯಕ್ಷರು,<br>ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ,<br><br>ದೊರೈ ಭಗವಾನ್,<br>ಹಿರಿಯ ಚಲನಚಿತ್ರ ನಿರ್ದೇಶಕರು.<br><br>ಶ್ರೀಮತಿ ಸುಧಾರಾಣಿ,<br>ಚಲನಚಿತ್ರ ಕಲಾವಿದರು.<br><br>ಎನ್.ಆರ್ ವಿಶುಕುಮಾರ್,<br>ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, | | |

# ಮಾಧ್ಯಮದವರ ಗಮನಕ್ಕೆ

2016–17 ನೇ ಸಾಲಿನ ಪತ್ರಕರ್ತರ ಮಾನ್ಯತಾ ಪತ್ರ ಹಾಗೂ ರಸ್ತೆ ಸಾರಿಗೆ ಸಂಸ್ಥೆ ಸ್ಮಾರ್ಟ್ ಕಾರ್ಡ್ ನವೀಕರಣಕ್ಕೆ ಮಾನ್ಯತೆ ಹೊಂದಿರುವ ಪತ್ರಕರ್ತರು ನಿಗದಿತ ನಮೂನೆಯ ಅರ್ಜಿಯನ್ನು ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆಯ ಅಂತರ್ಜಾಲ **karnatakavarthe.org** ನ **Downloads** ನಲ್ಲಿ ಪಡೆಯಬಹುದಾಗಿದೆ. ಮಾನ್ಯತಾ ಪತ್ರ ಹಾಗೂ ಸ್ಮಾರ್ಟ್ ಕಾರ್ಡ್ ನವೀಕರಣದ ಅರ್ಜಿಯನ್ನು ತುಂಬಿ, ಹಳೆಯ ಕಾರ್ಡ್‌ಗಳ ಜೆರಾಕ್ಸ್ ಪತ್ರಿಯನ್ನು ಲಗತ್ತಿಸಬೇಕು. ಡಿಸೆಂಬರ್ 10, 2015 ರ ಒಳಗಾಗಿ ಇಲಾಖೆಯ ಸುದ್ದಿ ಶಾಖೆಯಲ್ಲಿ ಸಲ್ಲಿಸಲು ಕೋರಿದೆ.

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ವಿಧಾನ ಮಂಡಲದಲ್ಲಿ ಇಂದು:

### ವಿಧಾನ ಸಭೆಯಲ್ಲಿ ವಿಧೇಯಕಗಳ ಅಂಗೀಕಾರ

ಇಂದು ಬೆಳಿಗ್ಗೆ ವಿಧಾನ ಸಭೆ ಸಮಾವೇಶಗೊಳ್ಳುತ್ತಿದ್ದಂತೆಯೇ 2015–16 ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿಯನ್ನು ಮುಖ್ಯಮಂತ್ರಿಗಳ ಪರವಾಗಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಶ್ರೀ ಟಿ. ಬಿ. ಜಯಚಂದ್ರ ಮಂಡಿಸಿದರು.

2015–16 ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಕಂತು) ಕುರಿತು ವಿಧಾನ ಸಭೆ ಅಂಗೀಕಾರ ನೀಡಿತು.

2015 ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 5) ವಿಧೇಯಕವನ್ನು ಮುಖ್ಯಮಂತ್ರಿಗಳ ಪರವಾಗಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಶ್ರೀ ಟಿ. ಬಿ. ಜಯಚಂದ್ರ ಮಂಡಿಸಿದರು. ವಿಧಾನ ಸಭೆಯ ಇದಕ್ಕೆ ಧ್ವನಿ ಮತದ ಮೂಲಕ ಅಂಗೀಕಾರ ನೀಡಿತು.

ಜವಳಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವ ಶ್ರೀ ಬಾಬುರಾವ್ ಚಿಂಚನಸೂರ ಅವರು 2015 ನೇ ಸಾಲಿನ ಕರ್ನಾಟಕ ಜಲ ಸಾರಿಗೆ ಮಂಡಳಿ ವಿಧೆಯಕವನ್ನು ಮಂಡಿಸಿದರು ಇದಕ್ಕೆ ಧ್ವನಿ ಮತದ ಮೂಲಕ ಅಂಗೀಕಾರ ನೀಡಿತು.

ಅಕ್ರಮ ಮರಳು ಗಣಿಗಾರಿಕೆ ಸಂಬಂಧ ರಚಿಸಲಾಗಿರುವ ವಿಧಾನ ಸಭಾ ಸದಸ್ಯರ ಅಧ್ಯಯನ ತಂಡದ ಅಧ್ಯಕ್ಷ ಹಾಗೂ ಶಾಸಕ ಎಸ್. ರಫೀಕ್ ಅಹಮದ್ ಅವರು ಅಕ್ರಮ ಮರಳುಗಾರಿಕೆ ಸಂಬಂಧ ರಚಿಸಲಾಗಿರುವ ವಿಧಾನ ಸಭಾ ಸದಸ್ಯರ ಅಧ್ಯಯನ ತಂಡದ ಮಧ್ಯಂತರ ವರದಿಯನ್ನು ವಿಧಾನ ಸಭೆಯಲ್ಲಿ ಮಂಡಿಸಿದರು.

ಬಾಬು/ಕೆಎಂ

# ಉದ್ಯಮಶೀಲತೆ ಕಾರ್ಯಕ್ರಮ : ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 27 (ಕರ್ನಾಟಕ ವಾರ್ತೆ)

ನೂತನ ಜವಳಿ ನೀತಿ ಯೋಜನೆಯ ಅಡಿಯಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯವರು 5 ದಿನಗಳ ಕೈಮಗ್ಗ ಮತ್ತು ಜವಳಿ ಉದ್ಯಮ ಆಧಾರಿತ ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮವನ್ನು ಡಿಸೆಂಬರ್ ತಿಂಗಳಲ್ಲಿ ಹಮ್ಮಿಕೊಳ್ಳುತ್ತಿದ್ದು, ತರಬೇತಿಯಲ್ಲಿ ಉದ್ಯಮಶೀಲತೆ, ಕೈಮಗ್ಗ ಹಾಗೂ ಜವಳಿ ಆಧಾರಿತ ಉದ್ಯಮಗಳನ್ನು ಆಯ್ಕೆ ಮಾಡುವ ಬಗ್ಗೆ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ದೊರೆಯುವ ಸೌಲಭ್ಯಗಳ ಬಗ್ಗೆ, ಉದ್ಯಮ ಸ್ಥಾಪಿಸಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಹಣಕಾಸು ಸಂಸ್ಥೆಗಳಿಂದ ಉದ್ಯಮ ಸ್ಥಾಪಿಸಲು ನೀಡುವ ಸಾಲ ಸೌಲಭ್ಯಗಳ ಬಗ್ಗೆ ಯೋಜನಾ ವರದಿಯನ್ನು ತಯಾರಿಸುವ ಬಗ್ಗೆ, ಹಣಕಾಸು ಹಾಗೂ ಮಾರುಕಟ್ಟೆ ನಿರ್ವಹಣೆ ಬಗ್ಗೆ , ಹಾಗೂ ಇತರೆ ವಿಷಯಗಳ ಬಗ್ಗೆ ನುರಿತ ತರಬೇತಿದಾರರಿಂದ ತರಬೇತಿಯನ್ನು ನೀಡಲಾಗುವುದು. ಆಸಕ್ತಿಯುಳ್ಳ ಅಭ್ಯರ್ಥಿಗಳು ನೊಂದಣೆಗಾಗಿ ಅರ್ಜಿಗಳನ್ನು ಉಪ ನಿರ್ದೇಶಕರ ಕಚೇರಿ, ಸರ್ಕಾರಿ ಜವಳಿ ತಾಂತ್ರಿಕ ಸಂಸ್ಥೆ ಪಕ್ಕ, ಐ.ಟಿ. ಬ್ಲಾಕ್, ಎಸ್.ಜೆ.ಪಿ. ಆವರಣ, ಕೆ.ಆರ್. ಸರ್ಕಲ್, ಬೆಂಗಳೂರು – 560 001 ಅಥವಾ ದೂರವಾಣಿ ಸಂಖ್ಯೆ 080 – 22344176 ಹಾಗೂ ಇ–ಮೇಲ್ deputydirectorhandlooms@yahoo.com. ಮೂಲಕ ಪಡೆಯಬಹುದಾಗಿದೆ.

:ಬಾಬು:ಜಿಪಿಆರ್.

# ನವದೆಹಲಿಯಲ್ಲಿ ಕೊಂಡಜ್ಜಿ ಬಸಪ್ಪ ಜನ್ಮ ಶತಮಾನೋತ್ಸವ ಕಾರ್ಯಕ್ರಮ

ಬೆಂಗಳೂರು, ನವೆಂಬರ್ 27 (ಕರ್ನಾಟಕ ವಾರ್ತೆ)

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ವತಿಯಿಂದ ನವೆಂಬರ್ 28 ರಂದು ಸಂಜೆ 4-00 ಗಂಟೆಗೆ ನವದೆಹಲಿಯ ದೆಹಲಿ ಕರ್ನಾಟಕ ಸಂಘ ಸಭಾಂಗಣದಲ್ಲಿ ದಿವಂಗತ ಕೊಂಡಜ್ಜಿ ಬಸಪ್ಪ ಜನ್ಮ ಶತಮೊನೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಸಮಾರಂಭದ ಅಧ್ಯಕ್ಷತೆಯನ್ನು ಕೇಂದ್ರ ಸರ್ಕಾರದ ಬೃಹತ್ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವ ಜಿ.ಎಂ. ಸಿದ್ದೇಶ್ವರ್ ವಹಿಸುವರು. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶ ನ್ಯಾಯಮೂರ್ತಿ ಶ್ರೀ ವಿ. ಗೋಪಾಲ ಗೌಡ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಕೇಂದ್ರದ ರಾಸಾಯನಿಕ ಹಾಗೂ ರಸಗೊಬ್ಬರಗಳ ಇಲಾಖೆ ಸಚಿವ ಅನಂತ ಕುಮಾರ್, ಲೋಕಸಭಾ ಸದಸ್ಯ ಮಲ್ಲಿಕಾರ್ಜುನ ಖರ್ಗೆ, ರಾಜ್ಯಸ್ಥಾನದ ಮಾಜಿ ಮುಖ್ಯಮಂತ್ರಿ ಅಶೋಕ ಗೆಹ್ಲೋಟ್ ಹಾಗೂ ನವದೆಹಲಿಯ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮುಖ್ಯ ರಾಷ್ಟ್ರೀಯ ಆಯುಕ್ತರಾದ ಬಿ. ಐ. ನಾಗರಾಳೆ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಬಾಬು:ಜಿಪಿಆರ್.

# ಅನಿರೀಕ್ಷಿತ ತಪಾಸಣೆ : ಒಟ್ಟು 106 ಮೊಕದ್ದಮೆ ದಾಖಲು

ಬೆಂಗಳೂರು, ನವೆಂಬರ್ 27 (ಕರ್ನಾಟಕ ವಾರ್ತೆ)

ಕಾನೂನು ಮಾಪನಶಾಸ್ತ್ರ ಇಲಾಖೆಯು ಆಟೋ ಮತ್ತು ಟ್ಯಾಕ್ಸಿ ಘಟಕದವರು ನವೆಂಬರ್ 19 ರಿಂದ 26 ರವರೆಗೆ ಬೆಂಗಳೂರಿನ ಪ್ರಮುಖ ಸ್ಥಳಗಳಲ್ಲಿ ಅನಿರೀಕ್ಷಿತ ತಪಾಸಣೆಯನ್ನು ಕೈಗೊಂಡು 756 ಆಟೋ ರಿಕ್ಷಾದವರ ಮೀಟರ್‌ಗಳನ್ನು ತಪಾಸಣೆ ಮಾಡಿ ಒಟ್ಟು 106 ಮೊಕದ್ದಮೆಗಳನ್ನು ದಾಖಲಿಸಿ ನಿಯಮಾನುಸಾರ ಕ್ರಮ ಜರುಗಿಸಲಾಗಿದೆ.

ಆಟೋರಿಕ್ಷಾ ಮಾಲೀಕರು/ಚಾಲಕರಿಗೆ ಸೂಚಿಸುವುದೇನೆಂದರೆ ದರ ಮೀಟರ್‌ಗಳ ಸತ್ಯಾಪನೆ ಅವದಿ ಮುಗಿದ ಕೂಡಲೇ ಕ್ಷೇತ್ರವಾರು ನಿರೀಕ್ಷಕರುಗಳ ಕಚೇರಿಗೆ ಹಾಜರುಪಡಿಸಿ ಸತ್ಯಾಪನೆ ಹಾಗೂ ಮುದ್ರೆ ಮಾಡಿಸಿಕೊಂಡು, ಆ ನಂತರ ಸಾರ್ವಜನಿಕರ ಸೇವೆಗಾಗಿ ಉಪಯೋಗಿಸಬೇಕಾಗಿರುತ್ತದೆ. ಸತ್ಯಾಪನೆ ಮುದ್ರೆ

ಆಗದ ದರ ಮೀಟರ್‌ಗಳನ್ನು ಉಪಯೋಗಿಸಿ ಸಾರ್ವಜನಿಕರಿಂದ ದರ ಪಡೆಯುವುದು ನಿಯಮ ಬಾಹಿರವಾಗಿದ್ದು ಇಂತಹವರ ಮೇಲೆ ಕಠಿಣ ಕ್ರಮ ಜರುಗಿಸಲಾಗುವುದು.

ಸಾರ್ವಜನಿಕರು/ಗ್ರಾಹಕರು ಇಂತಹ ಪ್ರಕರಣಗಳನ್ನು ಗಮನಿಸಿದಲ್ಲಿ ಇಲಾಖೆಗೆ ಇ-ಮೇಲ್ www.clm-lm-ka@nic.in ಅಥವಾ ದೂರವಾಣಿ ಸಂಖ್ಯೆ 080-22342380/22260554/22207750 ಮೂಲಕ ದೂರು ನೀಡಲು ತಿಳಿಸಿದೆ.

ಕವನು:ಜಿಪಿಆರ್.

# ಕಬ್ಬನ್ ಉದ್ಯಾನವನದಲ್ಲಿ ಈ ಭಾನುವಾರ

ಬೆಂಗಳೂರು, ನವೆಂಬರ್ 27(ಕರ್ನಾಟಕ ವಾರ್ತೆ)

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. ದಿನಾಂಕ:29-11-2015ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1. ಬೆಳಿಗ್ಗೆ 06.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "**ಉದ್ಯಾನವನದಲ್ಲಿ ಉದಯರಾಗ**" ಎಂಬ ಶೀರ್ಷಿಕೆಯಡಿ ಶ್ರೀ ಗಂಗಾಧರ ಸ್ವಾಮಿ ಮತ್ತು ತಂಡದವರು, ಬೆನಕನಹಳ್ಳಿ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆರವರಿಂದ ಜನಪದ ಗೀತೆ, ಭಕ್ತಿಗೀತೆ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
2. ಸಂಜೆ 05.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "**ಉದ್ಯಾನವನದಲ್ಲಿ ಸಂಧ್ಯಾರಾಗ**" ಎಂಬ ಶೀರ್ಷಿಕೆಯಡಿ ಶ್ರೀ ಕುಮಾರ್ ಎಸ್.ಹೆಚ್. ಮತ್ತು ತಂಡದವರು, ಬೆಂಗಳೂರುರವರಿಂದ ಜನಪದ ಗೀತೆ ಮತ್ತು ಭಕ್ತಿ ಗೀತೆ ಮತ್ತು ಭಾವಗೀತೆ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
3. ಬೆಳಿಗ್ಗೆ 6.00 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
4. ಉದ್ಯಾನವನದ ಆವರಣದಲ್ಲಿ ಜೈವಿಕ್ ಕೃಷಿಕ್ ಸೊಸೈಟಿ(ರಿ), ಲಾಲ್‌ಬಾಗ್, ಬೆಂಗಳೂರುರವರು ತಮ್ಮ ಮಾರಾಟ ಮಳಿಗೆಯಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆದ ವಿವಿಧ ರೀತಿಯ ಹಣ್ಣುಗಳು ಮತ್ತು ಹಣ್ಣಿನ ಜ್ಯೂಸ್ ಮತ್ತು ಇತರೆ ಸಾವಯವ ಆಹಾರ ಪದಾರ್ಥಗಳ ಮಾರಾಟವನ್ನು ಕೈಗೊಳ್ಳುತ್ತಾರೆ.

5. ಉದ್ಯಾನವನದ ಆವರಣದಲ್ಲಿ ಹಾಪ್‌ಕಾಮ್ಸ್, ಬೆಂಗಳೂರುರವರು ವಿವಿಧ Cut Fruits, Dry Fruits ಮತ್ತು ವಿವಿಧ ತಾಜಾ ಹಣ್ಣುಗಳು, ಪ್ಯಾಕ್ ಮಾಡಿದ ತಾಜಾ ತರಕಾರಿಗಳು ಹಾಗೂ ಹಣ್ಣಿನ ಜ್ಯೂಸ್‌ಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
6. ಉದ್ಯಾನವನದ ಆವರಣದಲ್ಲಿ ದಿ ನರ್ಸರಿಮೆನ್ ಕೋ-ಆಪರೇಟೀವ್ ಸೊಸೈಟಿ, ಲಾಲ್‌ಬಾಗ್, ಬೆಂಗಳೂರುರವರು ವಿವಿಧ ಅಲಂಕಾರಿಕ ಗಿಡಗಳು ಮತ್ತು ಉದ್ಯಾನವನ ಸಲಕರಣೆಗಳ ಮಾರಾಟವನ್ನು ಕೈಗೊಳ್ಳುತ್ತಾರೆ.

7. ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರುರವರ ವತಿಯಿಂದ ನಗರ ಕೇಂದ್ರ ಗ್ರಂಥಾಲಯ ಮತ್ತು ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯದ ಆವರಣದಲ್ಲಿ ಪುಸ್ತಕ ಪ್ರದರ್ಶನವನ್ನು ಏರ್ಪಡಿಸಲಾಗಿದೆ.
8. ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ **ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ** ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

## ಈ ಭಾನುವಾರದ ವಿಶೇಷ ಕಾರ್ಯಕ್ರಮಗಳು:

### I. ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ

- **ಬೆಳಿಗ್ಗೆ 7.00 ಗಂಟೆಯಿಂದ ಬೆಳಿಗ್ಗೆ 8.00 ಗಂಟೆಯವರೆಗೆ ಯೂನಿವರ್ಸ್ ಆರ್ಟ್ ಫೌಂಡೇಶನ್ ಸಹಯೋಗದೊಂದಿಗೆ ಕುಮಾರಿ ಆರತಿ ವಿಜಯಕುಮಾರ್ ರವರಿಂದ ಭರತ ನಾಟ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**
- **ಬೆಳಿಗ್ಗೆ 8.00 ಗಂಟೆಯಿಂದ ಬೆಳಿಗ್ಗೆ 9.00 ಗಂಟೆಯವರೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಬಾಲಭವನ ಸೊಸೈಟಿ, ಬೆಂಗಳೂರುರವರ ಸಹಯೋಗದೊಂದಿಗೆ ದ ಸಂಸ್ಕೃತಿ ಟೆಂಪಲ್ ಆಫ್ ಆರ್ಟ್, ಬೆಂಗಳೂರುರವರ ವತಿಯಿಂದ ನೃತ್ಯ ಪ್ರದರ್ಶನವನ್ನು ಏರ್ಪಡಿಸಲಾಗಿದೆ.**
- **ಸಂಜೆ 4.00 ಗಂಟೆಯಿಂದ 5.00 ಗಂಟೆಯವರೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಅಕ್ಷಯ ಫೌಂಡೇಷನ್ ರವರ ಸಹಯೋಗದೊಂದಿಗೆ ಡಾ. ರವಿಕುಮಾರ್ ನೀಹಾ, ಕನ್ನಡ ಪ್ರಾಧ್ಯಾಪಕರು ಹಾಗೂ ವಿಮರ್ಶಕರು, ತುಮಕೂರು ಇವರಿಂದ "ಶಾಂತಕವಿಯ ಕನ್ನಡ ಪರಿಕಲ್ಪನೆ" ಬಗ್ಗೆ ಉಪನ್ಯಾಸ ಕಾರ್ಯಕ್ರಮವನ್ನು ಮತ್ತು ಗುರುನಾಗಶ್ರೀರವರಿಂದ ಕನ್ನಡ ಗೀತೆಗಳ ಜಾನಪದ ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

### II. ಸ್ಥಳ: ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಹತ್ತಿರ

- **ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ರೇಷ್ಮೆ ಇಲಾಖೆಯ ವತಿಯಿಂದ ರೇಷ್ಮೆಗೂಡಿನಿಂದ ಮಾಡಿದ ವಿವಿಧ ವಿನ್ಯಾಸದ ಹಾರಗಳು ಅಲಂಕಾರಿಕ ಮತ್ತು ಇತರೆ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**
- ಬೆಳಿಗ್ಗೆ 9.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯವರೆಗೆ ತಾರಸಿ ಹಾಗೂ ಕೈತೋಟ (Kitchen Garden and Terrace Garden ) ಬಗ್ಗೆ ತೋಟಗಾರಿಕೆ ಉಪ ನಿರ್ದೇಶಕರು, ಬೆಂಗಳೂರು ನಗರ ರವರ ಸಹಕಾರದೊಂದಿಗೆ ಪ್ರಾತ್ಯಕ್ಷತೆ ಮೂಲಕ ತರಬೇತಿಯನ್ನು ನೀಡಲಾಗುವುದು.

# ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ

ಬೆಂಗಳೂರು, ನವೆಂಬರ್ 27 (ಕರ್ನಾಟಕ ವಾರ್ತೆ)

ಕುಷ್ಠ ರೋಗದಿಂದ ಗುಣಮುಖ ಹೊಂದಿದ ಗ್ರೇಡ್ II ಅಂಗವಿಕಲತೆ ಹೊಂದಿರುವ 100 ಅಭ್ಯರ್ಥಿಗಳನ್ನು ಗ್ರೂಫ್ –ಡಿ ಹುದ್ದೆಗೆ ಆಯ್ಕೆ ಮಾಡಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳಲ್ಲಿ 2014 ರಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿದೆ. ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ವಿಕಲತೆ ಇಲಾಖೆ ಸಚಿವಾಲಯ ಇವರು ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯನ್ನು ಅತ್ಯುತ್ತಮ ಉದ್ಯೋಗಾದಾತ ವರ್ಗದಡಿಯಲ್ಲಿ ರಾಷ್ಟ್ರೀಯ ಪ್ರಶಸ್ತಿ ಆಯ್ಕೆ ಮಾಡಿರುತ್ತದೆ. ಈ ಪ್ರಶಸ್ತಿ ಮೊತ್ತವು ರೂ. 1 ಲಕ್ಷ ನಗದು ಬಹುಮಾನ ದೊಂದಿರುತ್ತದೆ. ಈ ಸಮಾರಂಭವು ದಿನಾಂಕ3–12–2015 ರಂದು "ವಿಶ್ವ ಅಂಗವಿಕಲ ದಿನ" ರಂದು ದಿಲ್ಲಿಯಲ್ಲಿ ಪ್ರಧಾನಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆಯುತ್ತಿದೆ.

ಬಾಬು/ಕೆಎಂ

## National Award

**Bangalore, November 27 (Karnataka Information)**

**The Health and Family Welfare Department Government of Karnataka has been slected for National award by the Ministry of Social Justice and Empowerment, Department of Empowerment of Persons with Disabilities under the best employer category for providing Group "D" jobs for 100 leprosy cured patients with grade-II deformity in a single calendar year.**

**The award carries cash prize of 1 lakh and a citation. The award will be presented by Prime Minister, Sri Narendra Modi at a function on 3-12-2015 on the world disable day to be held at VigyanBhavan, New Delhi.**

ಬಾಬು/ಕೆಎಂ

## ವಾರ್ತಾ ವಿಶೇಷ:

## ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ್‌ಗೆ ಆಧಾರ್ ಮಾಹಿತಿ ಜೋಡಣೆ : ಅಗತ್ಯ ಮಾಹಿತಿ ನೀಡಿ

ಭಾರತ ಸರ್ಕಾರವು, ಭಾರತೀಯ ಪೌರರ ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ್ ಅನ್ನು ಸಿದ್ದಪಡಿಸುವ ದಿಸೆಯಲ್ಲಿ, ಮೊದಲ ಹೆಜ್ಜೆಯಾಗಿ 2011ರ ಜನಗಣತಿಯ ಮೊದಲ ಹಂತದ ಸಮಯದಲ್ಲಿ ದೇಶದಲ್ಲಿರುವ ಸಾಮಾನ್ಯ ನಿವಾಸಿಗಳಿಗೆ ಸಂಬಂಧಿಸಿದಂತೆ ಒಂದು ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ್ ಅನ್ನು ಈಗಾಗಲೇ ತಯಾರಿಸಿದೆ. 1955 ರ ಪೌರತ್ವ ಕಾಯಿದೆ ಮತ್ತು 2003 ರ ಪೌರತ್ವ ನಿಯಮಗಳ ಅಡಿಯಲ್ಲಿ ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ್ ಕಾಯಿದೆ ಬದ್ದವಾಗಿದೆ. ದೇಶದಲ್ಲಿನ 119 ಕೋಟಿಗೂ ಅಧಿಕ ಸಾಮಾನ್ಯ ನಿವಾಸಿಗಳಿಗೆ ಸಂಬಂಧಿಸಿದಂತೆ ವಿದ್ಯುನ್ಮಾನ ಮೂಲ ಮಾಹಿತಿ ಕೋಶವನ್ನು ಅಂದರೆ ಸಾಮಾನ್ಯ ನಿವಾಸಿಗಳ ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ್‌ಅನ್ನು ಆಂಗ್ಲ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ್‌ನ ಅಡಿಯಲ್ಲಿ ಈಗಾಗಲೇ ಸಿದ್ಧಪಡಿಸಲಾಗಿದೆ.

ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ್‌ನ ಮೂಲಕ ಮಾಹಿತಿ ಕೋಶದ ಪರಿಷ್ಕರಣೆ ಮತು ್ತಆಧಾರ್ ಸಂಖ್ಯೆಯೊಂದಿಗೆ ಜೋಡಣೆಯ ಕಾರ್ಯವನ್ನು ದೇಶದಾದ್ಯಂತ 2015 ರ ಜುಲೈ 1 ರಿಂದ ಕೈಗೊಳ್ಳಲು ಭಾರತ ಸರ್ಕಾರವು ನಿರ್ಧರಿಸಿದೆ. ಕರ್ನಾಟಕದಲ್ಲಿ ಎನ್.ಪಿ.ಆರ್. ಮೂಲ ಮಾಹಿತಿಕೋಶದ ಪರಿಷ್ಕರಣೆ ಮತ್ತು ಆಧಾರ್‌ನೊಡನೆ ಜೋಡಣೆಯ ಕಾರ್ಯಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯವನ್ನು 15–11–2015 ರಿಂದ ಪ್ರಾರಂಭಿಸಿ ಒಂದು ತಿಂಗಳ ಅವಧಿಯಲ್ಲಿ ಕೈಗೊಳ್ಳಲಾಗುತ್ತಿದೆ. ಈ ಸಂಬಂಧ ಅಂದರೆ ಎನ್.ಪಿ.ಆರ್. ಪರಿಷ್ಕರಣೆ ರಾಜ್ಯದಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಳ್ಳುವ ಅವಧಿ, ರಾಜ್ಯ/ಜಿಲ್ಲೆ/ತಾಲ್ಲೂಕು/ಪಟ್ಟಣ ಪೌರರ ನೋಂದಣಿ ಕಾರ್ಯ ನಿರ್ವಾಹಕರುಗಳ ನೇಮಕಾತಿ ಇವುಗಳಿಗೆ ಅಗತ್ಯವಾದ ಅಧಿಸೂಚನೆಗಳನ್ನು ರಾಜ್ಯದ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ್‌ನ ಪರಿಷ್ಕರಣೆ ಮತ್ತು ಆಧಾರ್ ಸಂಖ್ಯೆಯನ್ನು ಎನ್.ಪಿ.ಆರ್. ಮೂಲ ಮಾಹಿತಿಕೋಶದಲ್ಲಿ ಜೋಡಣೆಯ ಕಾರ್ಯವನ್ನು ಗಣತಿದಾರರು ಮನೆ ಮನೆಗೆ ಭೇಟಿ ನೀಡುವ ಮೂಲಕ ಕೈಗೊಳ್ಳಲಾಗುವುದು. ಎನ್.ಪಿ.ಆರ್. ಮೂಲ ಮಾಹಿತಿಕೋಶದಲ್ಲಿ ಕಂಡುಬರದ ಕುಟುಂಬಗಳನ್ನು/ವ್ಯಕ್ತಿಗಳನ್ನು ಹೊಸ ಎನ್.ಪಿ.ಆರ್. ಅನುಸೂಚಿಗಳನ್ನು ಭರ್ತಿಮಾಡುವ ಮೂಲಕ ನೋಂದಾಯಿಸಲಾಗುವುದು. ಈ ಕ್ಷೇತ್ರ ಕಾರ್ಯವು, ಎನ್.ಪಿ.ಆರ್. ಮೂಲ ಮಾಹಿತಿಕೋಶದ ಪರಿಷ್ಕರಣೆಗೆ ಅನುವಾಗುವುದು ಮತ್ತು ಮುಂದಿನ ದಿನಗಳಲ್ಲಿ ಸಮಯಾನುಸಾರ ಪರಿಷ್ಕರಣೆ ಮಾಡಲಾಗುವುದಲ್ಲದೆ. ಇದರೊಡನೆ ಜನನ, ಮರಣ ಮತ್ತು ವಿವಾಹದ : ನೋಂದಣಿಗಳನ್ನು ಅಳವಡಿಸಲಾಗುವುದು. ಪರಿಷ್ಕರಿತ ಎನ್.ಪಿ.ಆರ್. ಮೂಲ ಮಾಹಿತಿಕೋಶವು, ರಾಜ್ಯ ಸರ್ಕಾರವು ರೂಪಿಸುವ ವಿವಿಧ ಯೋಜನೆಗಳಿಗೆ ಸೂಕ್ತ ವ್ಯಕ್ತಿಗಳನ್ನು ಗುರುತಿಸಲು ಮೂಲಾಧಾರವಾಗುವುದು.

ರಾಜ್ಯ/ಜಿಲ್ಲೆ/ಛಾರ್ಜ್ ಮಟ್ಟದಲ್ಲಿನ ಎಲ್ಲಾ ಕಾರ್ಯ ನಿರ್ವಾಹಕರುಗಳಿಗೆ, ಎನ್.ಪಿ.ಆರ್. ಮೂಲ ಮಾಹಿತಿ ಕೋಶವನ್ನು ಪರಿಷ್ಕರಿಸಲು ಮತ್ತು ಹೊಸದಾಗಿ ಕಂಡುಬರುವ ಕುಟುಂಬಗಳಿಗೆ/ವ್ಯಕ್ತಿಗಳಿಗೆ ಖಾಲಿ ಎನ್.ಪಿ.ಆರ್. ಅನುಸೂಚಿಗಳನ್ನು ಭರ್ತಿಮಾಡಲು ಅಗತ್ಯವಾದ ತರಬೇತಿಯನ್ನು ಈಗಾಗಲೇ ನೀಡಲಾಗಿದೆ.

ಗಣತಿದಾರರು ತಮಗೆ ವಹಿಸಲಾಗಿರುವ ಗಣತಿ ಬ್ಲಾಕಿನಲ್ಲಿರುವ ಎಲ್ಲಾ ಕುಟುಂಬಗಳಿಗೆ ಭೇಟಿನೀಡುವರು ಮತ್ತು ಎನ್.ಪಿ.ಆರ್ ಮೂಲ ಮಾಹಿತಿಕೋಶದಲ್ಲಿ ಈ ಮುಂದೆ ಸೂಚಿಸಲಾಗಿರುವ ಮಾಹಿತಿಯನ್ನು ಸಂಗ್ರಹಿಸುವವರು ಅಂದರೆ 1. ವ್ಯಕ್ತಿಯ ಹೆಸರು, 2. ಲಿಂಗ 3. ಹುಟ್ಟಿದ ದಿನಾಂಕ 4. ತಂದೆಯ ಹೆಸರು, 5. ತಾಯಿಯ ಹೆಸರು, 6. ಹುಟ್ಟಿದ ಸ್ಥಳ, 7. ಸದ್ಯದ ವಿಳಾಸ ಇತ್ಯಾದಿ ಮತ್ತು ಎನ್.ಪಿ.ಆಋ. ಮೂಲ ಮಾಹಿತಿಕೋಶದಲ್ಲಿ ಆಧಾರ್ ಸಂಖ್ಯೆಯ ಜೋಡಣೆ ಕಾರ್ಯಗಳನ್ನು ಕೈಗೊಳ್ಳುವರು. ಗಣತಿ ಬ್ಲಾಕಿನಲ್ಲಿ

ಹೊಸದಾಗಿ ಕಂಡುಬರುವ ಕುಟುಂಬಗಳಿಗೆ/ವ್ಯಕ್ತಿಗಳಿಗೆ ಖಾಲಿ ಎನ್.ಪಿ.ಆರ್. ಅನುಸೂಚಿಗಳನ್ನು ಭರ್ತಿ ಮಾಡುವರು.

ಸಾರ್ವಜನಿಕರು, ತಮ್ಮ ಮನೆಗಳಿಗೆ ಗಣತಿದಾರರು ಭೇಟಿ ನೀಡಿದ ಸಮಯದಲ್ಲಿ ಸಂಪೂರ್ಣ ಸಹಕಾರವನ್ನು ಅಂದರೆ ಗಣತಿದಾರರು ಈಗಾಗಲೇ ಅಸ್ತಿತ್ವದಲ್ಲಿರುವ ಎನ್.ಪಿ.ಆರ್. ಮೂಲ ಮಾಹಿತಿಕೋಶವನ್ನು ಪರಿಷ್ಕರಿಸಲು ಮತ್ತು ಹೊಸದಾಗಿ ಕಂಡುಬರುವ ಕುಟುಂಬಗಳಿಗೆ/ವ್ಯಕ್ತಿಗಳಿಗೆ ಖಾಲಿ ಎನ್.ಪಿ.ಆರ್. ಅನುಸೂಚಿಗಳನ್ನು ಭರ್ತಿಮಾಡಲು ಸರಿಯಾದ ಮತ್ತು ಪೂರ್ಣವಾದ ಮಾಹಿತಿಯನ್ನು ಒದಗಿಸಲು ವಿನಂತಿಸಲಾಗಿದೆ. ತಮ್ಮ ಹಾಗೂ ತಮ್ಮ ಕುಟುಂಬದ ಎಲ್ಲಾ ಸದಸ್ಯರ ಆಧಾರ್ ಪತ್ರಗಳನ್ನು ಅಥವಾ ನೋಂದಾಯಿಸಿ ಆಧಾರ್ ಸಂಖ್ಯೆ ಲಭ್ಯವಿಲ್ಲದಿದ್ದಲ್ಲಿ ಪಾವತಿ ಪತ್ರಗಳನ್ನು ಮತ್ತು ಕುಟುಂಬದ ಪಡಿತರ ಚೀಟಿಯನ್ನು ಗಣತಿದಾರರು ಎನ್.ಪಿ.ಆರ್. ಪುಸ್ತಿಕೆಯಲ್ಲಿ ಗುರುತಿಸಿಕೊಳ್ಳಲು ಅನುವಾಗುವಂತೆ ತಮ್ಮಲ್ಲಿ ಸಿದ್ಧವಾಗಿ ಇಟ್ಟುಕೊಂಡಿರಲು ಸಾರ್ವಜನಿಕರಲ್ಲಿ ವಿನಂತಿಸಲಾಗಿದೆ.

ಬಾಬು:ಜೆಪಿಆರ್.